ಪಿ ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

ದಿನಾಂಕಃ 27-06-2025

**ಮುಂದುವರಿದ ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಜಿ ಎಂ ಎಂ ವಕೀಲರಿಂದ,

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಡಿಸ್ಚಾರ್ಜ ಸಮರಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ಅದೇ ರೀತಿ ಒಂದು ಅಂಗನೂನ್ಯತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಒಟ್ಟು ಹತ್ತು ವೈದ್ಯಕೀಯ ವೆಚ್ಚದ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-12 ರಿಂದ ನಿಪಿ-21 ಎಂದು ಗುರುತಿಸಲಾಯಿತು. ಅದೇ ರೀತಿ ಒಂದು ಅಂಬ್ಯುಲೆನ್ಸ ಬಾಡಿಗೆ ರಶೀದಿಯನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಒಟ್ಟು 5 ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-23 ಎಂದು ಗುರುತಿಸಲಾಯಿತು. ವಾಹನದ ಸರ್ವೇ ರಿಪೋರ್ಟ ಪ್ರತಿ ಮತ್ತು ವೆಚ್ಚದ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-24 ಎಂದು ಗುರುತಿಸಲಾಯಿತು. ಸದ್ರಿ ವಾಹನದ 10 ಫೋಟೊ ಮತ್ತು ಅದರ ಸಿಡಿಯನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅವುಗಳನ್ನು ಒಟ್ಟಾಗಿ ನಿಪಿ-25 ಎಂದು ಗುರುತಿಸಲಾಯಿತು. ಗ್ಯಾರೇಜ್ ನವರು ನೀಡಿದ ವಾಹನದ ಎಸ್ಟಿಮೇಟ್ ನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-26

ಎಂದು ಗುರುತಿಸಲಾಯಿತು. ಗ್ಯಾರೇಜನವರು ವಾಹನ ಸಂಪೂರ್ಣ ಹಾನಿಯಾಗಿದೆ ಎಂದು ನೀಡಿದ ಎಸ್ಟಿಮೇಟ್ ನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಸದ್ರಿ ದಾಖಲೆಯನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿಪಿ-27 ಎಂದು ಗುರುತಿಸಲಾಯಿತು. ಸದ್ರಿ ವಾಹನದ ಆರ್ ಸಿ, ಡಿ ಎಲ್ ಮತ್ತು ಇನ್ಸುರನ್ಸ ನ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-28 ರಿಂದ 29 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀಸವಾಲುಃ-** 2ನೇ ಎದುರುದಾರರ ಪರ ಶ್ರೀ ಎಸ್ ಎಮ್ ಬಿ ವಕೀಲರಿಂದ,

ನನ್ನ ವಾಹನ ಅಪಘಾತದಲ್ಲಿ ಸಂಪೂರ್ಣ ಹಾನಿಯಾಗಿದೆ ಎಂದು ಅರ್ಜಿ ಸಲ್ಲಿಸುವಾಗ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಮ್ಮ ವಕೀಲರು ತಯಾರಿಸಿದ ಪರಿಹಾರ ಅರ್ಜಿಯನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ವಾಹನ ಅಪಘಾತದಲ್ಲಿ ಹಾನಿಯಾಗಿದೆ ಎಂದು ನನ್ನ ಅರ್ಜಿಯಲ್ಲಿ ಬರೆದಿರುತ್ತೇನೆ. ನನ್ನ ವಾಹನಕ್ಕೆ ಯಾವುದೇ ಹಾನಿಯಾಗಿರಲಿಲ್ಲ, ಆ ಕಾರಣಕ್ಕಾಗಿ ನನ್ನ ಅರ್ಜಿಯಲ್ಲಿ ಸದ್ರಿ ವಿಚಾರ ಹೇಳಿಲ್ಲ ಎಂದರೆ ಸರಿಯಲ್ಲ.

ಫೋಟೊ, ಸಿಡಿ ಮತ್ತು ವಾಹನ ಸರ್ವೆ ರಿಪೋರ್ಟ ನಿಪಿ-24 ರಿಂದ 27 ನ್ನು ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-26 ಮತ್ತು 27 ನೀಡಿದ ಶೋರೂಮ್ ನ ಮಾಲೀಕರ ಹೆಸರು ಗಣಪತಿ ಅಂತಾ ಇರುತ್ತದೆ. ಅವರು ಹಕ್ಕಲಕೇರಿಯಲ್ಲಿ ವಾಸ ಮಾಡುತ್ತಾರೆ. ಸದ್ರಿಯವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ನಿಪಿ-24 ನ್ನು ನೀಡಿದ ಅಧಿಕಾರಿಯು ನನ್ನ ವಾಹನವನ್ನು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ದಿನಾಂಕ 06.05.2022 ರಂದು ತನಿಖೆ ಮಾಡಿ ವರದಿ ನೀಡಿರುತ್ತಾರೆ. ಅಪಘಾತ ಆದ ಸ್ಥಳದಲ್ಲಿ ನನ್ನ ವಾಹನ ಅರ್ಧ ಗಂಟೆಯವರೆಗೆ ಇತ್ತು. ನಂತರ ಅದನ್ನು ಮುರ್ಡೇಶ್ವರ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಲಾಯಿತು. ಪೊಲೀಸ್ ಠಾಣೆಯಿಂದ 15 ದಿನಗಳ ನಂತರ ನನ್ನ ವಾಹನವನ್ನು ಬಿಡುಗಡೆ ಮಾಡಿಕೊಂಡಿರುತ್ತೇನೆ.

ಪಿ ಡಬ್ಲು 1

ಪೊಲೀಸರು ನನ್ನ ವಾಹನವನ್ನು ಠಾಣೆಯಲ್ಲಿ ಪಂಚನಾಮೆ ಮಾಡಿದ ಪ್ರತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಅಪಘಾತ ಆದ ತಕ್ಷಣ ವಿಷಯವನ್ನು ಪೊಲೀಸ್ ಠಾಣೆಗೆ ತಿಳಿಸಬೇಕಾಗುತ್ತದೆ ಎಂಬ ಸಾಮಾನ್ಯ ಜ್ಞಾನ ನನಗಿರುತ್ತದೆ. ಅಪಘಾತ ಸ್ಥಳದಲ್ಲಿ ಸುಮಾರು 80 ಜನ ಸೇರಿದ್ದರು. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನಾನಾಗಲೀ, ನನ್ನ ಸಂಬಂಧಿಕರಾಗಲೀ ತಕ್ಷಣ ಪೊಲೀಸ್ ಠಾಣೆಗೆ ತಿಳಿಸಿ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಪೊಲೀಸರಿಗೆ ಪಿರ್ಯಾದಿ ನೀಡಿದ ಗೋವಿಂದ ಮಾಸ್ತಿ ಗೊಂಡ ನನಗೆ ಭಾವನಾಗಬೇಕು. ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ತರಹದ ತೀವ್ರ ಸ್ವರೂಪದ ಗಾಯ ಆಗಿರುವುದಿಲ್ಲ ಮತ್ತು ಅಂಗ ನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯರ ಮೇಲೆ ಪ್ರಭಾವ ಬೀರಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ಆಸ್ಪತ್ರೆಗಾಗಿ ಮತ್ತು ತಿರುಗಾಟಕ್ಕಾಗಿ ಹಣ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ವೆಲ್ಡಿಂಗ್ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ವೆಲ್ಡಿಂಗ್ ಕೆಲಸ ಮಾಡುತ್ತಿರಲಿಲ್ಲ, ಅಪಘಾತದಿಂದ ನನಗೆ ಯಾವುದೇ ನಷ್ಟ ಉಂಟಾಗಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾಹನಕ್ಕೆ ಸುಮಾರು ರೂ.50,000/- ಹಣ ರಿಪೇರಿ ಖರ್ಚು ಆಗಿದೆ ಎಂದರೆ ಸರಿ. ಆದರೆ ನನ್ನ ವಾಹನ ರಿಪೇರಿ ಮಾಡಲು ಬರುವುದಿಲ್ಲ ಎಂದು ನಿಪಿ-27 ರಂತೆ ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ-30 ವಿಮಾ ಪಾಲಿಸಿಯಲ್ಲಿ ವಾಹನದ ಬೆಲೆ ರೂ.66,950/- ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿದ ವಾಹನದ ವೆಚ್ಚದ ದಾಖಲೆಗಳು ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವೆಚ್ಚಕ್ಕೂ ಒಂದಕ್ಕೊಂದು ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನಿಗೆ ಡಿ ಎಲ್ ಮತ್ತು ಫಿಟನೆಸ್ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿ. ಆದ್ದರಿಂದ 2 ನೇ ಎದುರುದಾರ ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥನಿರುವುದಿಲ್ಲ ಎಂದರೆ ಸರಿಯಲ್ಲ.

ಪಿ ಡಬ್ಲು 1

1 ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಆದ್ದರಿಂದ ಅವರ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

**ಸಹಿ ಇದೆ**.

ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ